# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್.ಬಿ.ಡಿ-3929/2014/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:28.6.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಶ್ರೀ.ರಾಮಕೃಷ್ಣಯ್ಯ ಎ.ಎಂ., ತಂದೆ ಮುನಿಮಾರಯ್ಯ, ವಾಸ: ಅಡಕಮಾರನಹಳ್ಳಿ, ಕಸಬಾ ಹೋಬಳಿ, ಗ್ರಾಮ ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ.ರಾಮಕೃಷ್ಣಯ್ಯ ಎ.ಎಂ., ತಂದೆ ಮುನಿಮಾರಯ್ಯ, ವಾಸ: ಅಡಕಮಾರನಹಳ್ಳಿ, ಕಸಬಾ ಹೋಬಳಿ, ಗ್ರಾಮ ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, (2) ಶ್ರೀ ಚಂದ್ರಶೇಖರ, ನಿವೃತ್ತ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಾಚೇನಹಟ್ಟಿ ಗ್ರಾಮ ಪಂಚಾಯತ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, (3) ಶ್ರೀ ಸಿ. ಪ್ರಕಾಶ, ಪ್ರಭಾರ ಕಾರ್ಯದರ್ಶಿ, ಬಾಚೇನಹಳ್ಳಿ ಗ್ರಾಮ ಪಂಚಾಯತ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು (4) ಶ್ರೀ ಎನ್.ಗುರುಶಂಕರ್, ಸಹಾಯಕ ಇಂಜಿನಿಯರ್, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ-ವಿಭಾಗ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮ-1984 ಅಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

2012-13 ಮತ್ತು 2013-14ನೇ ಸಾಲಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಯೋಜನೆಯಲ್ಲಿ ಅನೇಕ ಕಾಮಗಾರಿಗಳನ್ನು ನಡೆಸಿರುವುದಾಗಿ ಎದುರುದಾರರು ಬಿಲ್ಲುಗಳನ್ನು ಮಾಡಿಕೊಂಡಿರುತ್ತಾರೆ. ಆದರೆ ಯಾವುದೇ ಕಾಮಗಾರಿಗಳನ್ನು ನಡೆಸಿಲ್ಲ ಮಾಹಿತಿ ಹಕ್ಕಿನಡಿಯಲ್ಲಿ ದಾಖಲೆಗಳನ್ನು ಪಡೆದು ಪರಿಶೀಲಿಸಿದ್ದು ಸುಮಾರು 25-30ಲಕ್ಷ ರೂ.ಗಳನ್ನು

ಅಕ್ರಮವಾಗಿ ಬಿಲ್ಲು ಮಾಡಿರುವುದು ಕಂಡುಬಂದಿರುತ್ತದೆ. ಉದ್ಯೋಗ ಖಾತ್ರಿ ಚೀಟಿಗಳನ್ನು ಮಾಡಿಸಿ ಗ್ರಾಮ ಪಂಚಾಯ್ತಿ ಅಧ್ಯಕ್ಷರ ಹೆಸರಿಗೆ ಎ.ಟಿ.ಎಂ. ಕಾರ್ಡ್ ಮಾಡಿಸಿ ಕಾರ್ಡುಗಳನ್ನು ಅವರ ಬಳಿಯೇ ಇಟ್ಟುಕೊಂಡು ಬಿಲ್ಲುಗಳನ್ನು ಡ್ರಾ ಮಾಡಿರುತ್ತಾರೆ. ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಎ.ಹೆಚ್ ಪ್ರಕಾಶ್ ರವರೊಂದಿಗೆ ಎದುರುದಾರರು ಶಾಮೀಲಾಗಿ ಕಾಮಗಾರಿಗಳಲ್ಲಿ ಅಕ್ರಮ ಎಸಗಿರುತ್ತಾರೆಂದು ಆಪಾದಿಸಿ ತನಿಖೆ ನಡೆಸಲು ಕೋರಿಕೊಂಡಿದ್ದಾರೆ.

3. ಈ ದೂರನ್ನು ತಾಂತ್ರಿಕ ಶಾಖೆಗೆ ವಹಿಸಿ ವಿವಾದಿತ ಕಾಮಗಾರಿಗಳನ್ನು ಖುದ್ದು ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಕಾಮಗಾರಿಗಳನ್ನು ಕುರಿತು ದೂರುದಾರರ ಸಮಕ್ಷಮದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯ್ತಿಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ಸಮಕ್ಷಮ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಕಾರ್ಯನಿರ್ವಾಹಕ ಅಧಿಕಾರಿ, ಮಾಗಡಿ ತಾಲ್ಲೂಕು ಪಂಚಾಯತ್ ಇವರು ಹಾಜರಾಗಿ ತಮ್ಮ ವರದಿ ಸಲ್ಲಿಸಿ ಅಧಿಕಾರಿಗಳೊಂದಿಗೆ ತಾವು ಸ್ಥಳಕ್ಕೆ ಹೋಗಿ ದೂರುದಾರರಾದ ಶ್ರೀ ಎ.ಎಂ. ರಾಮಕೃಷ್ಣಯ್ಯ ಇವರನ್ನು ಕರೆಯಿಸಿ ಅವರ ಸಮಕ್ಷಮದಲ್ಲಿ ತನಿಖೆಕೈಗೊಳ್ಳಲು ದಿ: 25.7.2015ರಂದು ಗ್ರಾಮ ಪಂಚಾಯ್ತಿ ಬಾಚೇನಹಟ್ಟಿಗೆ ಭೇಟಿ ಕೊಡಲಾಯಿತು. ತನಿಖಾ ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ಕಡತಗಳು ವಹಿಗಳು ಎಂ.ಬಿ ಪುಸ್ತಕ ಇತರೆ ದಾಖಲಾತಿಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸುವಂತೆ ಸೂಚಿಸಿ ದಿ: 7-7-2015ಕ್ಕೆ ತನಿಖೆ ನಿಗದಿ ಪಡಿಸಲಾಯಿತು. ದಿನಾಂಕ: 7-7-2015ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಿರಿಯ ಇಂಜಿನಿಯರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಾಚೇನಹಟ್ಟಿ ಗ್ರಾಮ ಪಂಚಾಯತ್, ದೂರುದಾರರು ಮತ್ತು ಗ್ರಾಮಸ್ಥರ ಸಮಕ್ಷಮದಲ್ಲಿ ತನಿಖೆ ಕೈಗೊಳ್ಳಲು ಪ್ರಾರಂಭಿಸಿದಾಗ ದೂರುದಾರರು ತಮ್ಮ ಪತ್ರಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು ತಾಳೆಯಾಗಿರುವುದರಿಂದ ಈ ಸಂಸ್ಥೆಗೆ ನೀಡಿದ ದೂರಿನ ಅರ್ಜಿಯನ್ನು ವಾಪಸ್ಸು ಪಡೆದಿರುವುದಾಗಿ ಲಿಖಿತ ಮನವಿ ಸಲ್ಲಿಸಿದ್ದಾರೆ. ಆದ್ದರಿಂದ ತನಿಖೆ ನಿಲ್ಲಿಸಲಾಯಿತು ಅಂತ ಹೇಳಿದ್ದಾರೆ. ದೂರುದಾರರಿಗೆ ಪೋನ್ ಮಾಡಿ ತಿಳಿಸಿದರೂ ಸಹ ಅವರು ಹಾಜರಾಗಿಲ್ಲ.

4. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಮಾಗಡಿ, ಇವರಿಗೆ ದೂರುದಾರರು ತಮ್ಮ ದೂರನ್ನು ಹಿಂದಕ್ಕೆ ಪಡೆದುಕೊಂಡಿದ್ದಾರೆ ಎನ್ನುವ ಒಂದೇ ಕಾರಣದಿಂದಾಗಿ ತನಿಖೆಯನ್ನು ಏಕೆ ನಿಲ್ಲಿಸಲಾಯಿತು? ಎನ್ನುವ ಬಗ್ಗೆ ಕಾರಣ-ಕೇಳುವ-

ನೋಟಿಸ್ ಕೊಡಲಾಗಿತ್ತು. ಸದರಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಟಿ. ಮುರಡಯ್ಯ ಇವರು ಸ್ವತಃ ಹಾಜರಾಗಿ ತಮ್ಮ ವರದಿಯನ್ನು ಸಲ್ಲಿಸಿದ್ದು, ಬಾಚೇನಹಟ್ಟಿ ಗ್ರಾಮ ಪಂಚಾಯತಿ ವತಿಯಿಂದ ಒಟ್ಟು 8 ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು, ಸದರಿ ಕಾಮಗಾರಿಗಳಲ್ಲಿ;

(ಎ) 2ನೇ ಕಾಮಗಾರಿಯಾದ ರಾಮಜ್ಜನ ಮನೆಯಿಂದ ನರಸಿಂಹಮೂರ್ತಿ ಮನೆಯವರೆಗೆ ಪ್ರವಾಹ ನಿಯಂತ್ರಣ ತಡೆಗೋಡೆಯ ಕಾಮಗಾರಿಯಲ್ಲಿ ಭೌತಿಕವಾಗಿ ಅಳತೆ ಮಾಡಿದಾಗ 56 ಮೀಟರ್ ಉದ್ದ ಇತ್ತು ಆದರೆ, ಅಳತೆ ಪುಸ್ತಕದಲ್ಲಿ 138 ಮೀಟರ್ ಉದ್ದ ಅಂತ ನಮೂದಿಸಲಾಗಿದೆ. ಸುಮಾರು 93 ಮೀಟರ್ ಉದ್ದದ ಕಾಂಕ್ರಿಟ್ ರಸ್ತೆ ನಿರ್ಮಾಣ ಕಡಿಮೆ ನಿರ್ವಹಿಸಿರುವುದು ಕಂಡು ಬಂದಿರುತ್ತದೆ.

(ಬಿ) 3ನೇ ಕಾಮಗಾರಿಯಾದ ಅಡಕಮಾನಹಳ್ಳಿ ಗ್ರಾಮದ ಶಿವಣ್ಣನ ಮನೆಯಿಂದ ನರಸಿಂಹಮೂರ್ತಿ ಮನೆಯವರೆಗೆ ಪ್ರವಾಹ ನಿಯಂತ್ರಣ ತಡೆಗೋಡೆ ಕಾಮಗಾರಿಯ ಅಳತೆ ಪುಸ್ತಕದಲ್ಲಿ 81.80 ಮೀಟರ್ ಉದ್ದ ಅಂತ ನಮೂದಿಸಿದ್ದು, ಆದರೆ, ಸುಮಾರು 27.5 ಮೀಟರ್ ಉದ್ದದ ಚರಂಡಿ ಕಾಮಗಾರಿಯನ್ನು ಕಡಿಮೆ ನಿರ್ವಹಿಸಿರುತ್ತಾರೆ. ಕೇವಲ 54.75 ಮೀಟರ್ ಚರಂಡಿ ನಿರ್ಮಾಣ ಕಾಮಗಾರಿ ಮಾತ್ರ ನಿರ್ವಹಿಸಿದ್ದಾರೆ.

(ಸಿ) 6ನೇ ಕಾಮಗಾರಿಯಾದ ಅಡಕಮಾನಹಳ್ಳಿ ಗ್ರಾಮದ ವೀರಭದ್ರಯ್ಯನ ಮನೆಯಿಂದ ದುರ್ಗಯ್ಯನ ಮನೆಯವರೆಗೆ ಪ್ರವಾಹ ನಿಯಂತ್ರಣ ತಡೆಗೋಡೆ ಕಾಮಗಾರಿಯ ಅಳತೆ ಪುಸ್ತಕದಲ್ಲಿ ಒಟ್ಟು 104 ಮೀಟರ್ ಉದ್ದ ಅಂತ ನಮೂದಿಸಿದ್ದು, ಆದರೆ, ಸುಮಾರು 24.20 ಮೀಟರ್ ಉದ್ದದ ಕಾಂಕ್ರೀಟ್ ರಸ್ತೆ ಕಾಮಗಾರಿಯನ್ನು ಕಡಿಮೆ ನಿರ್ವಹಿಸಿರುತ್ತಾರೆ. ಕೇವಲ 79.80 ಮೀಟರ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ ಮಾತ್ರ ನಿರ್ವಹಿಸಿದ್ದಾರೆ ಅಂತ ವರದಿ ಸಲ್ಲಿಸಿದ್ದಾರೆ.

5. ಆ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಿ.ಡಿ.ಓ., ಪ್ರಭಾರ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ಇವರನ್ನು ಗೌರವಾನ್ವಿತರ ಆದೇಶದಂತೆ 2, 3 ಮತ್ತು 4ನೇ ಎದುರುದಾರರನ್ನಾಗಿ ಸೇರ್ಪಡೆ ಮಾಡಿಕೊಂಡು ಅವರಿಂದ ಆಕ್ಷೇಪಣೆಯನ್ನು ಕೇಳಲಾಗಿದೆ.

6. 2ನೇ ಎದುಗುದಾರರು ನಿವೃತ್ತರಾಗಿರುತ್ತಾರೆ. 2 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅದರಲ್ಲಿ ಕಾಮಗಾರಿಯ ಅಳತೆ ವ್ಯತ್ಯಾಸದ ಬಗ್ಗೆ ತಮಗೆ ತಿಳುವಳಿಕೆ ಇಲ್ಲದೇ ಇರುವುದರಿಂದ ಅಭಿಯಂತರರ ಬಿಲ್ಲಿನ ಪ್ರಕಾರ ಹಣವನ್ನು

3

ಪಾವತಿಸಲಾಗಿರುತ್ತದೆ. ತಾಂತ್ರಿಕತೆಯ ಬಗ್ಗೆ ತಮಗೆ ತಿಳಿವಳಿಕೆ ಇರುವುದಿಲ್ಲ. ಯಾವುದೇ ಹಣಕಾಸನ್ನು ನಗದು ಕೊಡುವುದಿಲ್ಲ, ಇ.ಎಫ್.ಎಂ.ಎಸ್. ಮೂಲಕ ಹಣವನ್ನು ಪಾವತಿಸಲಾಗುತ್ತದೆ. ಆದ್ದರಿಂದ ತಮ್ಮನ್ನು ಈ ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ.

7. 4ನೇ ಎದುರುದಾರರಿಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಸಹ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

8. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಾಗಡಿ ಇವರ ವರದಿಯಲ್ಲಿ ನಮೂದಿಸಿರುವ ಮೇಲ್ಕಾಣಿಸಿರುವ 2, 3 ಮತ್ತು 6ನೇ ಕಾಮಗಾರಿಗಳನ್ನು ಸಂಪೂರ್ಣವಾಗಿ ನಿರ್ವಹಿಸದೇ ಅಳತೆ ಪುಸ್ತಕದಲ್ಲಿ ಸುಳ್ಳು ನಮೂದುಗಳನ್ನು ಮಾಡಿ, 2 ರಿಂದ 4ನೇ ಎದುರುದಾರರು ಕಾಮಗಾರಿಯ ಪೂರ್ಣ ಹಣವನ್ನು ಪಡೆದುಕೊಂಡು ದುರುಪಯೋಗಪಡಿಸಿಕೊಂಡಿರುತ್ತಾರೆ. 2 ಮತ್ತು 3ನೇ ಎದುರುದಾರರು ಕಾಮಗಾರಿಗಳು ಸಂಪೂರ್ಣವಾಗಿ ನಿರ್ವಹಣೆಯಗಿದೆ ಎನ್ನುವುದಕ್ಕೆ ಯಾವುದೇ ಖಚಿತವಾದ ಮಾಹಿತಿ ಇಲ್ಲದೇ ಹಣ ಪಾವತಿಗೆ ನೆರವಾಗಿದ್ದಾರೆ. ಆದ್ದರಿಂದ, 2 ರಿಂದ 4ನೇ ಎದುರುದಾರರು ಕರ್ತವ್ಯಲೋಪವನ್ನು ಎಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ.

9. 1ನೇ ಎದುರುದಾರರು ಈ ಪ್ರಕರಣದ ತನಿಖೆಯನ್ನು ನಡೆಸಿರುವುದರಿಂದ ಅವರ ವಿರುದ್ಧ ಪ್ರಕರಣವನ್ನು ಕೈಬಿಡಬಹುದಾಗಿದೆ.

10. 2, 3 ಮತ್ತು 6ನೇ ಕಾಮಗಾರಿಗಳಲ್ಲಿ ಅಳತೆ ಪುಸ್ತಕದಲ್ಲಿ ಹೆಚ್ಚುವರಿಯಾಗಿ ನಮೂದಿಸಿರುವ ಮೂರು ಕಾಮಗಾರಿಗಳ ಬಿಲ್ಲಿನ ಹಣವನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ಮತ್ತು 4ನೇ ಎದುರುದಾರರಿಂದ ಹಣ ವಸೂಲಿ ಮಾಡಿ ತಾತ್ಕಾಲಿಕ ಹಣ ದುರುಪಯೋಗ ಮಾಡಿರುವುದಕ್ಕಾಗಿ ಸೂಕ್ತ ಕ್ರಿಮಿನಲ್ ಮೊಕದ್ದಮೆಯನ್ನು ಗುತ್ತಿಗೆದಾರರು ಮತ್ತು 4ನೇ ಎದುರುದಾರರ ವಿರುದ್ಧ ದಾಖಲಿಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1ನೇ ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 28/6/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.